# ಪ್ರಹಸನ ಪ್ರಸಂಗ

**ಆಧ್ಯಾತ್ಮಿಕ** ಜೀವನದ ಮುಖ್ಯ ಉದ್ದೇಶವೇ ಆತ್ಮಪರಿವರ್ತನೆ. ನಾವು ಮಾಡುವ ಧ್ಯಾನ ಜಪಾದಿ ಸಾಧನೆಗಳು ನಮ್ಮನ್ನು ನೈತಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಪರಿವರ್ತಿಸದಿದ್ದರೆ ಅವುಗಳಿಗೆ ಯಾವ ಮೌಲ್ಯವೂ ಇಲ್ಲ. ನಾವು ಸಾಧನೆ ಮಾಡುತ್ತ ಹೋದಂತೆಲ್ಲ ನೈತಿಕ ಪರಿಪೂರ್ಣತೆಯನ್ನೂ ವೈರಾಗ್ಯ ಮನೋಭಾವವನ್ನೂ ಅಂತರ್ಮುಖತೆಯನ್ನೂ ಇತರರನ್ನು ಪ್ರೀತಿ ಸಹಾನುಭೂತಿಯಿಂದ ಕಾಣುವ ಸಾಮರ್ಥ್ಯವನ್ನೂ ಶಾಂತಿ ನೆಮ್ಮದಿಯನ್ನೂ ಪಡೆಯಬೇಕು. ಇಲ್ಲದಿದ್ದರೆ ನಾವು ಸರಿಯಾಗಿ ಸಾಧನೆ ಮಾಡುತ್ತಿಲ್ಲ ಎಂದರ್ಥ.

ಒಂದು ಆಶ್ರಮದಲ್ಲಿ ಸಾಧುವೊಬ್ಬನು ಬಹಳ ಕಟ್ಟುನಿಟ್ಟಿನಿಂದ ಜಪ ಮಾಡುತ್ತಿದ್ದ. ಪ್ರತಿ ದಿನವೂ ತಪ್ಪದೆ ನಿರ್ದಿಷ್ಟ ಸಮಯದಲ್ಲಿ ಜಪಮಾಲೆಯನ್ನು ತಿರುಗಿಸುತ್ತ ನಿರ್ದಿಷ್ಟ ಸಂಖ್ಯೆಯ ಜಪ ಮಾಡುತ್ತಿದ್ದ. ಹತ್ತು ವರ್ಷ ಇಷ್ಟು ನಿಷ್ಠೆಯಿಂದ ಸಾಧನೆ ಮಾಡಿದರೂ ಅವನಲ್ಲಿ ಯಾವ ಪರಿವರ್ತನೆಯೂ ಆಗಲಿಲ್ಲ. ಎಲ್ಲರೊಡನೆಯೂ ಜಗಳ ಕಾಯುತ್ತಿದ್ದ, ಕೊಟ್ಟ ಕೆಲಸವನ್ನು ಸರಿಯಾಗಿ ಮಾಡುತ್ತಿರಲಿಲ್ಲ. ತುಂಬ ಸಿಡುಕಲು ಸ್ವಭಾವ.

ಒಂದು ದಿನ ಅವನಿಗೆ ಬುದ್ಧಿ ಕಲಿಸಬೇಕೆಂದು ಇನ್ನೋರ್ವ ಸಾಧು, ಅವನು ರೂಮಿನಲ್ಲಿ ಬಾಗಿಲು ಹಾಕಿಕೊಂಡು ಜಪ ಮಾಡುತ್ತಿರುವಾಗ, ಹೊರಗಡೆಯಿಂದ ರೂಮಿನ ಬಾಗಿಲನ್ನು ತಟ್ಟತೊಡಗಿದ. ಶಬ್ದ ಕೇಳಿದಕೂಡಲೆ ಇವನಿಗೆ ಕೋಪ ನೆತ್ತಿಗೇರತೊಡಗಿತು. ಕೋಪ ತಡೆಯಲು ಮಾಲೆಯನ್ನು ಜೋರಾಗಿ ತಿರುಗಿಸುತ್ತ ಜಪ ಮಾಡತೊಡಗಿದ. ಹೊರಗಡೆಯ ಸಾಧು ಈಗ ಅವನ ಹೆಸರು ಹಿಡಿದು ಕರೆಯತೊಡಗಿದ. ಇವನ ಕೋಪ ಹೆಚ್ಚು ಹೆಚ್ಚು ತೀವ್ರವಾಗತೊಡಗಿತು. ಹೊರಗಡೆಯ ಸಾಧು ಕರೆಯುವುದನ್ನು ಮುಂದುವರಿಸಿದ. ಹೀಗೆ ಸುಮಾರು ಹತ್ತು ನಿಮಿಷ ಕಳೆಯಿತು.

ಒಳಗೆ ಜಪಮಾಡುತ್ತಿದ್ದ ಸಾಧುವಿಗೆ ಇನ್ನು ತಡೆಯಲಾಗಲಿಲ್ಲ. ಕೋಪಾವೇಶದಿಂದ ಜಪಮಾಲೆಯನ್ನು ಬದಿಗೆಸೆದು, ಹೂಂಕರಿಸುತ್ತ ಮೇಲೆದ್ದು ಧಡಾರನೆ ಬಾಗಿಲು ತೆಗೆದ. ಹೊರಗಡೆ ಆ ಇನ್ನೋರ್ವ ಸಾಧು ಮುಗುಳುನಗುತ್ತ ನಿಂತುಕೊಂಡಿದ್ದ. ಅವನನ್ನು ನೋಡಿ ಕೋಪದಿಂದ ತನಗೆ ಗೊತ್ತಿದ್ದ ಎಲ್ಲ ಅವಾಚ್ಯ ಶಬ್ದಗಳನ್ನು ಉಪಯೋಗಿಸಿ ಸಹಸ್ರನಾಮಾರ್ಚನೆ ಮಾಡಿದ. ಇದನ್ನೆಲ್ಲ ಶಾಂತವಾಗಿ ಕೇಳುತ್ತ ನಿಂತಿದ್ದ ಆ ಇನ್ನೋರ್ವ ಸಾಧು ಕೊನೆಯಲ್ಲಿ ಈ ರೀತಿ ನುಡಿದ: 'ನೋಡು, ನಾನು ಹತ್ತು ನಿಮಿಷ ಮಾತ್ರ ನಿನ್ನ ಹೆಸರು ಹಿಡಿದು ಕರೆದೆ. ಅದಕ್ಕೇ ಇಷ್ಟೊಂದು ಕೋಪ ನಿನಗೆ. ನೀನು ಹತ್ತು ವರ್ಷಗಳಿಂದ ಭಗವಂತನ ಹೆಸರನ್ನು ಕರೆಯುತ್ತಿದ್ದೀಯೆ. ಅವನಿಗೆ ಇನ್ನೆಷ್ಟು ಕೋಪ ಬಂದಿರಬೇಕು! (❋)

**ಸುಖ** ನಮ್ಮೊಳಗೇ ಇದೆ, ಅದನ್ನು ನಮ್ಮೊಳಗೇ ನಾವು ಅರಸುವುದನ್ನು ಬಿಟ್ಟು ಹೊರ ಪ್ರಪಂಚದಲ್ಲಿ ನಾವದನ್ನು ಅರಸುತ್ತ ಹೋಗುತ್ತೇವೆ. ಇದೊಂದು ವ್ಯರ್ಥ ಅನ್ವೇಷಣೆ.

ಒಬ್ಬ ವ್ಯಕ್ತಿ ತನ್ನ ಕೊಠಡಿಯಲ್ಲಿ ಚಿಕ್ಕ ಸೂಜಿಗೆ ದಾರವನ್ನು ಪೋಣಿಸುತ್ತಿದ್ದ. ಸೂಜಿ ಕೈತಪ್ಪಿ ಕೆಳಗೆ ಬಿತ್ತು. ಅವನು ಹೊರಗಡೆ ಬಂದು ಬೀದಿಯಲ್ಲಿ ಏನನ್ನೊ ಅರಸತೊಡಗಿದ. ಬೀದಿಯಲ್ಲಿ ಓಡಾಡುವವರೊಬ್ಬರು,

'ಏನನ್ನು ಹುಡುಕುತ್ತಿರುವೆ?'

'ನಾನು ಸೂಜಿಯನ್ನು ಹುಡುಕುತ್ತಿದ್ದೇನೆ'

'ಬೀದಿಯಲ್ಲಿ ಅದು ಬಿದ್ದದ್ದು ಹೇಗೆ?'

'ಇಲ್ಲ, ಅದು ಬಿದ್ದುಹೋದದ್ದು ಕೊಠಡಿಯಲ್ಲಿ.'

'ಹಾಗಾದರೆ ಇಲ್ಲೇಕೆ ಹುಡುಕುತ್ತಿರುವೆ?'

'ಕೊಠಡಿಯಲ್ಲಿ ಬೆಳಕಿಲ್ಲ, ಕಾಣಿಸುವುದಿಲ್ಲ. ಅದಕ್ಕಾಗಿ' ಎಂದು ಅವನು ಉತ್ತರಿಸಿದ.

ಹೀಗೆಯೇ ನಮ್ಮ ಅಂತರಂಗದ ಕತ್ತಲೆಯಲ್ಲಿ ಸುಖವನ್ನು ಕಾಣದೆ ಅದನ್ನು ಇಂದ್ರಿಯ ವಿಷಯಗಳ ರಸ್ತೆಯಲ್ಲಿ ಹುಡುಕುತ್ತ ಹೊರಟಿದ್ದೇವೆ. (❋)

**ಉಷ್ಟ್ರಾಣಾಂ ವಿವಾಹೇಷು**
**ಗೀತಂ ಗಾಯಂತಿ ಗರ್ದಭಾಃ |**
**ಪರಸ್ಪರಂ ಪ್ರಶಂಸಂತಿ**
**ಅಹೋ ರೂಪಮಹೋ ಧ್ವನಿಃ ||**

ಒಂಟೆಗಳ ವಿವಾಹದ ಸಮಯದಲ್ಲಿ ಕತ್ತೆಗಳ ಹಾಡುಗಾರಿಕೆ. ವಧೂವರರನ್ನು ನೋಡಿ 'ಆಹಾ! ಎಂಥ ರೂಪ !' ಎಂದು ಕತ್ತೆಗಳು ಹೊಗಳಿದರೆ, 'ಆಹಾ! ಎಂಥ ಧ್ವನಿ!' ಎಂದು ಒಂಟೆಗಳು ಕತ್ತೆಗಳನ್ನು ಹೊಗಳುತ್ತವೆ.

ಹೀಗೆಯೇ ನಾವು ಅಜ್ಞಾನದಲ್ಲಿರುವಾಗ ನಮಗೆ ದುಃಖದಾಯಕವಾದ ಇಂದ್ರಿಯಭೋಗವೇ ಸುಖಪ್ರದವಾಗಿ ಕಂಡುಬರುತ್ತದೆ. (❋)